**<u>ಸಾಕ್ಷಿಯನ್ನು ದಿನಾಂಕ:05.07.2024 ರಂದು ಕರೆಸಿ  ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲು: ಶ್ರೀ ಆರ್. ಹೆಚ್. ಪ್ರತಿವಾದಿ ವಕೀಲರಿಂದ</u>**

**1.** ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ.  ನನಗೆ ಕಂದಾಯ ದಾಖಲೆಗಳ ಬಗ್ಗೆ ಮತ್ತು ಕ್ರಯ ಪತ್ರಗಳ ಬಗ್ಗೆ ತಿಳಿದಿರುತ್ತದೆ ಎಂದರೆ ಸರಿ.  2011 ರಲ್ಲಿ ದಾನ ಪತ್ರದಂತೆ ಪಹಣಿಯಲ್ಲಿ ಹೆಸರು ಬದಲಾವಣೆಯಾಗಿರುತ್ತದೆ, ಆದ ಕಾರಣ ಈ ದಾವೆಯನ್ನು ಹೂಡಿರುತ್ತೇನೆ.  ದಾವಾ ಸ್ವತ್ತು ನಮ್ಮ ಕುಟುಂಬಕ್ಕೆ ಕ್ರಯದ ಮುಖಾಂತರ ಬಂದಿರುತ್ತದೆ. ದಿ:25.04.1963 ರಲ್ಲಿ ನಂಜುಂಡಯ್ಯನವರು ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ.  1963 ರಲ್ಲಿ ನಾನು ಇನ್ನು ಜನಿಸಿರಲಿಲ್ಲ. ನಾನು ವಯಸ್ಕನಾದ ನಂತರ ದಾವಾ ಸ್ವತ್ತಿನ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಿರುದಿಲ್ಲ.

**2.** ದಾವಾ ಸ್ವತ್ತಿನ ಖಾತೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ದಾವೆ ಹೂಡಿರುತ್ತೇನೆ ಎಂದು  ನುಡಿದಿದ್ದಾರೆ. ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ನ್ಯಾಯಾಲಯಕ್ಕೆ ಪಹಣಿಗಳನ್ನು ಸಲ್ಲಿಸಿರುತ್ತೇನೆ.  2011 ರಲ್ಲಿ ಪ್ರತಿವಾದಿಗೆ ಅವರ ಗಂಡ ದಾವಾ ಸ್ವತ್ತನ್ನು  ದಾನ ಬರೆದುಕೊಟ್ಟಿರುತ್ತಾರೆ.  ದಾನಪತ್ರವಾದ ನಂತರ ವಿಚಾರ ತಿಳಿದ ನಂತರ 2011 ರಲ್ಲಿ ನನಗೆ ದಾವೆ ಹೂಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ.

**3.** ನಾನು ಹಾಜರು ಪಡಿಸಿರುವ ದಾವಾ ಸ್ವತ್ತಿನ ದಾಖಲೆಗಳು ಗಂಗಮ್ಮನವರ ಹೆಸರಿನಲ್ಲಿರುತ್ತದೆ ಎಂದರೆ ಸರಿ.  ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.  ಪಹಣಿಯ ಕಾಲಂ ನಂ. 12 ರಲ್ಲಿ ನನ್ನ ಹೆಸರಾಗಲೀ ನನ್ನ ತಾಯಿಯ ಹೆಸರಿನಲ್ಲಾಗಲೀ ನಮೂದು ಮಾಡಿರುವುದಿಲ್ಲ.  ನಾನು ಗ್ರಾಮ ಲೆಕ್ಕಾಧಿಕಾರಿಗಳ ಬಳಿ ಹೋಗಿ ಪಹಣಿಯ ಕಾಲಂ ನಂ. 12 ರಲ್ಲಿ ನನ್ನ ಹೆಸರನ್ನು ಸೇರಿಸಲು ಯಾವುದೇ ಮನವಿ ಮಾಡಿರುವುದಿಲ್ಲ.  ದಾವಾ ಸ್ವತ್ತಿನ ಕ್ರಯ ಪತ್ರವನ್ನು ನಮ್ಮ ಅಜ್ಜಿ ಗುರುಸಿದ್ದಮ್ಮನವರು ಸೃಷ್ಟಿ ಮಾಡಿಕೊಂಡಿರರುತ್ತಾರೆ ಎಂದರೆ ಸರಿಯಲ್ಲ.  ಪ್ರತಿವಾದಿ ಅವಿದ್ಯಾವಂತರು ಎಂದರೆ ನನಗೆ ಗೊತ್ತಿಲ್ಲ.

**4.** ಪಾತಗಾನಹಳ್ಳಿಯಿಂದ ಲಿಂಗಾಪುರಕ್ಕೆ ಸುಮಾರು 20 ಕಿ.ಮೀ. ಅಂತರದಲ್ಲಿರುತ್ತದೆ ಎಂದರೆ ಸಾಕ್ಷಿಯು 8 ಕಿ.ಮೀ. ಅಂತರ ಇರುತ್ತದೆ ಎಂದು ನುಡಿದಿದ್ದಾರೆ.  ಲಿಂಗಾಪುರದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿಯು ಜಮೀನು ಇತ್ತು ಅದನ್ನು ಮಾರಾಟ

ಮಾಡಿರುತ್ತೇವೆ ಎಂದು ನುಡಿದಿದ್ದಾರೆ. ಲಿಂಗಾಪುರದಲ್ಲಿನ ನಮ್ಮ ಜಮೀನನ್ನು 2016-17 ರಲ್ಲಿ ನಮ್ಮ ತಾಯಿ ಮಾರಾಟ ಮಾಡಿರುತ್ತಾರೆ. ದಾನ ಪತ್ರದ ಆಧಾರ ಮೇಲೆ ಪ್ರತಿವಾದಿ ಸ್ವಾಧೀನಹೊಂದಿ ಅವರೇ ವ್ಯವಸಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಸುಮಾರು 55 ವರ್ಷಗಳ ಹಿಂದೆ ಕ್ರಯ ಪತ್ರವಾಗಿರುವುದರಿಂದ ಈ ದಾವೆಯನ್ನು ಸಲ್ಲಿಸಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**5.** ನಿಪಿ-1 ರ ಮೂಲ ದಾಖಲೆ ನನ್ನ ಬಳಿ ಇರುವುದಿಲ್ಲ. ನಮ್ಮ ಅಜ್ಜಿಯವರು ನಿಪಿ-1 ನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ರ ದಾಖಲೆಯಲ್ಲಿ ನಂಜುಂಡಯ್ಯನವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು-ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**